**ಎರಡನೇ ಅಪರ ಸಿವಿಲ್‌ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು.**

**ಸಿಸಿ 385/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ವೆಂಕಟೇಶ್ | ಚಾ.ಸಾ-3 |
| ತಂದೆಯ ಹೆಸರು | - | ಕಾಳಯ್ಯ | ಪ್ರಾ.ಸಾ-3 |
| ವಯಸ್ಸು | - | 44 ವರ್ಷ | |
| ಉದ್ಯೋಗ | - | ಚಾಲಕ | |
| ವಾಸಸ್ಥಳ | - | ಮದ್ದೂರು | |

ದಿನಾಂಕಃ 06-11-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:ಅಭಿಯೋಜನೆಯ ಪರಃ ಎಪಿಪಿ ಯವರಿಂದ:**

ಚಾಸಾ-1 ನನ್ನ ಹೆಂಡತಿ , ಚಾ.ಸಾ.2 ರವರು ನನ್ನ ಚಿಕ್ಕಮ್ಮ. ಚಾ.ಸಾ. 4 ಮತ್ತು 5 ನನ್ನ ಪರಿಚಯಸ್ಥರು. ಆರೋಪಿಯ ಪರಿಚಯ ಇದೆ, ಅವರು ನಮ್ಮ ಊರಿನವರು. ನನ್ನ ಮತ್ತು ಚಾ.ಸಾ. 2 ಮತ್ತು ಚಾ.ಸಾ. 1 ರವರ ಮೇಲೆ ಆರೋಪಿ ಯಾವುದೇ ಗಲಾಟೆ ಆಗಿಲ್ಲ. ಆರೋಪಿ ನನ್ನ ಮೇಲೆ ಹಲ್ಲೆ ಮಾಡಿಲ್ಲ. ಚಾ.ಸಾ. 1 ಮತ್ತು 2 ರವರೊಂದಿಗೆ ಅಸಭ್ಯವಾಗಿ ನಡೆದುಕೊಂಡಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದಃ**

ದಿನಾಂಕಃ 11.02.2018 ರಂದು ಚಾ.ಸಾ. 1 ರವರು ಮದ್ದೂರು ಆಸ್ಪತ್ರೆಯ ಬಳಿ ಹೋಗಿದ್ದಾಗ ಆರೋಪಿಯವರು ನನಗೆ ಬಾಯಿಗೆ ಬಂದಂತೆ ಬೈದು ಹಣ ವಾಪಸ್ಸು ಕೊಡುವಂತೆ ಕೇಳಿರುತ್ತಾರೆ, ಅದಕ್ಕೆ ಇನ್ನೆರಡು ಮೂರು ದಿನಗಳಲ್ಲಿ ವಾಪಸ್ಸು ಕೊಡುವವುದಾಗಿ ಆತನಿಗೆ ಹೇಳಿರುತ್ತಾರೆ. ಅದಕ್ಕೆ ಆರೋಪಿಯವರು ನಾಳೆ ಸಂಜೆಯೊಳಗಡೆ ನೀನು ನನ್ನ ಮನೆಯ ಹತ್ತಿರ ಹಣವನ್ನು ಕೊಟ್ಟರೆ ಸರಿ, ಇಲ್ಲಾ ಎಂದರೆ ರಾತ್ರಿ ನಿಮ್ಮ ಮನೆಯ ಹತ್ತಿರ ಬಂದು ನಿನ್ನ ಮಾನ ಮರ್ಯಾದೆ ಕಳೆಯುತ್ತೇನೆಂದು ಹೇಳಿ ಹೋಗಿರುತ್ತಾನೆಂದರೆ ಸರಿಯಲ್ಲ. ನಂತರ ದಿನಾಂಕಃ 12.02.2018 ರಂದು ರಾತ್ರಿ ಚಾ.ಸಾ. 1 ಮತ್ತು 2 ರವರು ತರಕಾರಿ ತರಲು ಹೋಗಿದ್ದಾಗ ರಾತ್ರಿ

8.30 ಗಂಟೆ ಸಮಯದಲ್ಲಿ ನೀವು ಮತ್ತು ನಿಮ್ಮ ತಮ್ಮ ಗೋವಿಂದ ನಿಮ್ಮ ಬಾಮೈದ ಮದನ್ ರವರು ನಿಮ್ಮ ಮನೆಯ ಮುಂಭಾಗದ ರಸ್ತೆಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದಾಗ ನಿಮ್ಮ ಮನೆಯ ಹತ್ತಿರದಲ್ಲಿಯೇ ಇರುವ ಶಾಸಕ ಡಿ ಸಿ ತಮ್ಮಣ್ಣ ರವರ ಮನೆಯ ಮುಂಭಾಗದಲ್ಲಿ ಗಲಾಟೆ ಶಬ್ದ ಕೇಳಿ ನೀವು ಅಲ್ಲಿಗೆ ಹೋಗಿ ನೋಡಲಾಗಿ ಅಲ್ಲಿ ಚಾ.ಸಾ. 1 ನಿಮ್ಮ ಹೆಂಡತಿ ಮತ್ತು ಚಾ.ಸಾ. 2 ನಿಮ್ಮ ಚಿಕ್ಕಮ್ಮ ಇಬ್ಬರನ್ನು ಆರೋಪಿ ಅಡ್ಡಗಟ್ಟಿ ಹಿಡಿದು ಎಳೆದಾಡಿ, ನಿಮ್ಮ ಹೆಂಡತಿಯ ಚೂಡಿದಾರ್ ಟಾಪ್ ನ್ನು ಹಿಡಿದು, ಹರಿದು ಹಾಕಿರುತ್ತಾರೆಂದರೆ ಸರಿಯಲ್ಲ. ಆಗ ಆರೋಪಿ ಚಾ.ಸಾ. 2 ರವರನ್ನು ಹೊಡೆದು, ಎಡಕಾಲಿಗೆ ಕಚ್ಚಿ ಗಾಯವನ್ನುಂಟುಮಾಡಿರುತ್ತ್ರೆಂರದೆ ಸರಿಯಲ್ಲ. ನಂತರ ನೀವು ಗಲಾಟೆಯನ್ನು ಬಿಡಿಸಲು ಹೋದಾಗ ಆರೋಪಿ ನಿಮ್ಮ ಎಡಗೈನ ಉಂಗುರದ ಬೆರಳಿಗೆ ಕಚ್ಚಿ ಗಾಯವನ್ನುಂಟು ಮಾಡಿರುತ್ತಾರಂದರೆ ಸರಿಯಲ್ಲ. ಆಗ ನಿಮ್ಮ ಬಾಮೈದು ಮದನ್ ಗೆ ಎಡ ಮುಂಗೈ ಕಚ್ಚಿ ಗಾಯ ವನ್ನುಂಟು ಮಾಡಿರುತ್ತಾರೆಂದರೆ ಸರಿಯಲ್ಲ, ಆಗ ನಿಮ್ಮ ತಮ್ಮ ಗೋವಿಂದ ರವರು ಗಲಾಟೆಯನ್ನು ಬಿಡಿಸಿ, ಆರೋಪಿಯನ್ನು ಸಮಾಧಾನಪಡಿಸಿ ಕಳುಹಿಸಿರುತ್ತಾರೆಂದರೆ ಸರಿಯಲ್ಲ. ಆರೋಪಿ ನೀವು ಕೊಡಬೇಕಾದ 2 ಸಾವಿರ ರೂ. ಹಣವನ್ನು ವಾಪಸ್ಸು ಕೊಟ್ಟಿಲ್ಲವೆಂದು ಈ ರೀತಿ ಚಾ.ಸಾ. 1 ಮತ್ತು 2 ರವರನ್ನು ಹಿಡಿದು, ಎಳೆದಾಡಿ ಅವಮಾನ ಮಾಡಿ, ಬಿಡಿಸಲು ಬಂದ, ನಿಮಗೆ ಕಚ್ಚಿರುತ್ತಾರೆಂದರೆ ಸರಿಯಲ್ಲ. ನಂತರ ನೀವು ಚಾ.ಸಾ.1,2 ಮತ್ತು 4 ರವರು ಮದ್ದೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಈ ಬಗ್ಗೆ ಚಾ.ಸಾ. 1 ನಿಮ್ಮ ಹೆಂಡತಿ ಮದ್ದೂರು ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆಂದರೆ ಸರಿಯಲ್ಲ. ನೀವು ಸದರೀ ದೂರಿನಂತೆ ದಿನಾಂಕಃ 14.02.2018 ರಂದು ಪೋಲೀಸರಿಗೆ ಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ಒಪ್ಪದ ಹೇಳಿಕೆಯ ಭಾಗವನ್ನು ನಿ.ಪಿ. 4 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ನಿ.ಪಿ. 4 ರಲ್ಲಿರುವ ವಿಚಾರಗಳು ನಿಮಗೆ ಗೊತ್ತಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರು ಏನೂ ಇಲ್ಲ ಎಂದು ಹೇಳಿರುತ್ತಾರೆ.</u>**

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ